**ಕರ್ನಾಟಕ ಸರ್ಕಾರ**

ನಂ.ಗ್ರಾಅಪ 481 ಗ್ರಾಪಂಅ 2016

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:27-09-2017

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್),
ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

**ಇವರಿಗೆ:**

ಎಲ್ಲಾ ಜಿಲ್ಲಾ ಪಂಚಾಯತಿಯ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೆ,

**ವಿಷಯ:** ಗ್ರಾಮ ಪಂಚಾಯತಿಗಳು ಸೋಲಾರ್ ಸ್ಥಾವರಗಳು, ಪಾರ್ಕ್‌ಗಳು ಮತ್ತು ವಿಂಡ್ ಮಿಲ್ಸ್‌ಗಳ ಮೇಲೆ ತೆರಿಗೆ ವಿಧಿಸಿ ವಸೂಲಿ ಮಾಡುವ ಬಗ್ಗೆ

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 939 ಗ್ರಾಪಂಅ 2016 ದಿನಾಂಕ:19-11-2016.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199, 199ಎ ಹಾಗೂ ಅನುಸೂಚಿ-IV ರಲ್ಲಿ ಗ್ರಾಮ ಪಂಚಾಯತಿಗಳು ತೆರಿಗೆ ಮತ್ತು ಫೀಜುಗಳನ್ನು ವಿಧಿಸಿ ವಸೂಲಿ ಮಾಡಲು ಮತ್ತು ಪರಿಷ್ಕರಿಸಲು ಅವಕಾಶ ಕಲ್ಪಿಸಲಾಗಿದೆ. ಈ ಪ್ರಕರಣಗಳನ್ವಯ ತೆರಿಗೆಯನ್ನು ಭೂಮಿಯ ಮೂಲಮೌಲ್ಯದ ಮೇಲೆ ತೆರಿಗೆ ವಿಧಿಸಬೇಕಾಗಿರುತ್ತದೆ. ಈ ಸಂಬಂಧ ಅನುಸರಿಸಬೇಕಾದ ಕ್ರಮಗಳನ್ನು ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ಸವಿವರವಾಗಿ ತಿಳಿಸಲಾಗಿದೆ. **ಆದಾಗ್ಯೂ ಕೆಲವು ಗ್ರಾಮ ಪಂಚಾಯತಿಗಳು ಸೋಲಾರ್ ಸ್ಥಾವರಗಳು, ಸೋಲಾರ್ ಪಾರ್ಕ್‌ಗಳು ಮತ್ತು ವಿಂಡ್ ಮಿಲ್ಸ್‌ಗಳ ಮೇಲೆ ಬಂಡವಾಳ ಮೌಲ್ಯದ ಆಧಾರದ ಮೇಲೆ ತೆರಿಗೆ ವಿಧಿಸಿ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.**

ಆದುದರಿಂದ ಗ್ರಾಮ ಪಂಚಾಯತಿಗಳು **ಸೋಲಾರ್ ಸ್ಥಾವರಗಳು, ಸೋಲಾರ್ ಪಾರ್ಕ್‌ಗಳು ಮತ್ತು ವಿಂಡ್ ಮಿಲ್ಸ್‌ಗಳ ಮೇಲೆ ತೆರಿಗೆ ವಿಧಿಸಿ ವಸೂಲಿ ಮಾಡಲು ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದ್ದು** ಅದರಂತೆ ಗ್ರಾಮ ಪಂಚಾಯತಿಗಳು ತೆರಿಗೆ ವಿಧಿಸಿ ವಸೂಲಿ ಮಾಡಲು ಕ್ರಮ ವಹಿಸುವಂತೆ ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

1. ಬಂಡವಾಳ ಮೌಲ್ಯದ ಆಧಾರದ ಮೇಲೆ ತೆರಿಗೆ ವಿಧಿಸುವ ಬದಲು ಭೂಮಿಯ ಮೂಲ ಮೌಲ್ಯದ ಆಧಾರದ ಮೇಲೆ ತೆರಿಗೆ ವಿಧಿಸುವುದು.
2. ಸೋಲಾರ ಸ್ಥಾವರಗಳ ಮೇಲೆ ಭೂಮಿಯ ಮೂಲ ಮೌಲ್ಯದ ಮೇಲೆ ಕನಿಷ್ಟ 0.4% ಕ್ಕಿಂತ ಕಡಿಮೆ ಇಲ್ಲದೆ ಆದರೆ 1.00% ಕ್ಕಿಂತ ಹೆಚ್ಚಿಲ್ಲದೆ ತೆರಿಗೆ ವಿಧಿಸುವುದು.
3. ಸೋಲಾರ್ ಪಾರ್ಕನಲ್ಲಿ ಸೋಲಾರ್ ಸ್ಥಾವರಗಳಿದ್ದರೆ, ಸದರಿ ಸ್ಥಾವರಗಳಿಗೆ ಈಗಾಗಲೇ ಅಂಶ (2) ರಲ್ಲಿ ತಿಳಿಸಿರುವಂತೆ ತೆರಿಗೆ ವಿಧಿಸಿದ್ದರೆ ಅವುಗಳನ್ನು ಹೊರತುಪಡಿಸಿ ಸೋಲಾರ್ ಪಾರ್ಕ್‌ಗಳ ಮೇಲೆ ಭೂಮಿಯ ಮೂಲ ಮೌಲ್ಯದ ಮೇಲೆ ಕನಿಷ್ಟ 0.50% ಕ್ಕಿಂತ ಕಡಿಮೆ ಇಲ್ಲದೆ ಆದರೆ 1.50% ಕ್ಕಿಂತ ಹೆಚ್ಚಿಲ್ಲದೆ ತೆರಿಗೆ ವಿಧಿಸುವುದು.
4. ವಿಂಡ್ ಮಿಲ್ಸ್ ವರ್ಗದಡಿ ಪ್ರತಿ ಟರ್ಬೈನ್‌ಗೆ ಕನಿಷ್ಟ ವಾರ್ಷಿಕ ರೂ. 50,000 ಗಳಿಂದ 1.00 ಲಕ್ಷದವರೆಗೆ ತೆರಿಗೆ ವಿಧಿಸುವುದು.

ತಮ್ಮ ವಿಶ್ವಾಸಿ,

**(ಟಿ.ವಿ. ಅರುಣ್‌ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿ: ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
5. ಕೋಆರ್ಡಿನೇಟರ್, ಇಂಡಿಯನ್ ವಿಂಡ್ ಪವರ್ ಅಸೋಸಿಯೇಷನ್ ನಂ.50, ಮಿಲೆನಿಯಂ ಟವರ್ಸ್, ಕ್ವೀನ್ಸ್ ರೋಡ್, ಬೆಂಗಳೂರು-51.